
# ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯಿಂದ




ಶ್ರೀರಾಮಕೃಷ್ಣರು ಬಂದದ್ದು ಇಂದಿನ ಧರ್ಮವನ್ನು ಬೋಧಿಸುವುದಕ್ಕೆ. ಅದು ವಿಧ್ವಂಸಕಾರಿಯಲ್ಲ, ನಿರ್ಮಾಣಕಾರಿ. ಅವರು ಪ್ರಕೃತಿಯಿಂದ ಹೊಸ ಹೊಸ ವಾಸ್ತವಾಂಶಗಳನ್ನು ಪಡೆದರು. ಆದ್ದರಿಂದ ಅವರಿಗೆ ವೈಜ್ಞಾನಿಕವಾದ ಧರ್ಮ ದೊರಕಿತು. ಅದು ಯಾವಾಗಲೂ 'ನಂಬು' ಎನ್ನುವುದಿಲ್ಲ, 'ನೋಡು' ಎನ್ನುತ್ತದೆ. ನೀವು ಅದೇ ಮಾರ್ಗದಲ್ಲಿ ಹೋದರೆ ಅದೇ ದರ್ಶನ ದೊರೆಯುವುದು. ದೇವರು ಎಲ್ಲರಿಗೂ ದೊರಕುವನು. ಸೌಹಾರ್ದ ಎಲ್ಲರಿಗೂ ಸಾಧ್ಯ. ಶ್ರೀರಾಮಕೃಷ್ಣರ ಬೋಧನೆಯೇ 'ಹಿಂದೂಧರ್ಮದ ಸಾರ.' ಅದು ಅವರಿಗೆ ವಿಶಿಷ್ಟವಾದದ್ದೇನೂ ಅಲ್ಲ. ಅದು ತಮಗೆ ವಿಶಿಷ್ಟವಾದದ್ದು ಎಂದು ಅವರು ಎಂದೂ ಹೇಳಲಿಲ್ಲ; ಹೆಸರು, ಕೀರ್ತಿಗೆ ಸ್ವಲ್ಪವೂ ಆಶಿಸಿದವರಲ್ಲ ಅವರು.

ಆ ಮಹಾನುಭಾವರು ತ್ಯಾಗಮೂರ್ತಿಯಾಗಿದ್ದರು. ಸಂನ್ಯಾಸಿಯಾದರೆ ಪ್ರಾಪಂಚಿಕ ದ್ರವ್ಯವನ್ನು ಮತ್ತು ಪದವಿಗಳನ್ನು ತ್ಯಜಿಸುವುದು ನಮ್ಮ ದೇಶದಲ್ಲಿ ರೂಢಿ. ನನ್ನ ಗುರುದೇವ ಅಕ್ಷರಶಃ ಇದನ್ನು ಪಾಲಿಸಿದರು. ತಮ್ಮಿಂದ ಯಾವುದಾದರೊಂದು ಕಾಣಿಕೆಯನ್ನು ಅವರು ಸ್ವೀಕರಿಸಿದರೆ ತಾವು ಧನ್ಯರೆಂದು ಎಷ್ಟೋ ಜನ ಭಾವಿಸಿದ್ದರು. ಅವರು ಸ್ವೀಕರಿಸುವುದಾದರೆ ಸಹಸ್ರಾರು ರೂಪಾಯಿಗಳನ್ನು ಸಂತೋಷದಿಂದ ಕೊಡಲು ಸಿದ್ಧರಾಗಿದ್ದರು. ಆದರೆ ಮೊದಲು ಇಂತಹವರಿಂದ ದೂರವಿರಲು ಅವರು ಯತ್ನಿಸಿದರು. ಕಾಮಕಾಂಚನಗಳ ತ್ಯಾಗದಲ್ಲಿ ಸಂಪೂರ್ಣ ವಿಜಯಿಯಾದ ಬದುಕಿನ ಉದಾಹರಣೆ ಅವರ ಜೀವನ. ಈ ಭಾವನೆಗಳನ್ನೆಲ್ಲ ಅವರು ಮೀರಿಹೋಗಿದ್ದರು. ಈ ಶತಮಾನಕ್ಕೆ ಅಂತಹ ವ್ಯಕ್ತಿಗಳು ಅತ್ಯವಶ್ಯಕ. ಜೀವನದ ಆವಶ್ಯಕ ವಸ್ತುಗಳು ಇಲ್ಲದೆ (ಈಗ ಅವು ಪ್ರತಿದಿನವೂ ಎಲ್ಲ ಪ್ರಮಾಣವನ್ನೂ ಮೀರಿ ಹೆಚ್ಚುತ್ತಿವೆ) ತಾವು ಒಂದು ತಿಂಗಳೂ ಇರಲಾರೆವೆಂದು ಜನ ಭಾವಿಸುವಾಗ, ಈ ಮಹಾತ್ಯಾಗ ಅತಿಮುಖ್ಯ. ಇಂತಹ ಕಾಲದಲ್ಲಿ ಸಂದೇಹವಾದಿಗಳಾದ ಜನರೆದುರಿಗೆ, ಪ್ರಪಂಚದ ಐಶ್ವರ್ಯ ಕೀರ್ತಿಗಳಾವುದನ್ನೂ ಗಮನಕ್ಕೆ ತಾರದೆ ಇರುವುದು ಸಾಧ್ಯವೆಂದು ಎದ್ದು ತೋರುವುದು ಅವಶ್ಯಕ. ಇಂತಹ ವ್ಯಕ್ತಿಗಳು ಜಗತ್ತಿನಲ್ಲಿ ಇನ್ನೂ ಇರುವರು.

ನನ್ನ ಗುರುದೇವರ ಜೀವನದ ಮತ್ತೊಂದು ಮುಖ, ಅವರಿಗೆ ಮಾನವಕೋಟಿಯಲ್ಲಿ ಇದ್ದ ಅಪಾರ ಪ್ರೇಮ. ನನ್ನ ಗುರುದೇವರ ಜೀವನದ ಅರ್ಧಭಾಗ ಅಧ್ಯಾತ್ಮ ಶಕ್ತಿಯನ್ನು ಶೇಖರಿಸುವುದರಲ್ಲಿ ಕಳೆಯಿತು. ಉಳಿದ ಆಯುಷ್ಯವನ್ನು ಅದನ್ನು ಹಂಚುವುದರಲ್ಲಿ ಅವರು ಕಳೆದರು.

ಶ್ರೀರಾಮಕೃಷ್ಣರು ಯಾರಿಗೂ ಒಂದು ಕಟುವಾದ ಮಾತನ್ನು ಆಡಿದವರಲ್ಲ. ಅವರು ಅಷ್ಟು ಅದ್ಭುತವಾಗಿ ಉದಾರಿಗಳಾಗಿದ್ದರು. ಪ್ರತಿಯೊಂದು ಪಂಗಡದವರೂ ಅವರು ತಮಗೆ ಸೇರಿದವರೆಂದು ಭಾವಿಸುತ್ತಿದ್ದರು. ಅವರು ಎಲ್ಲರನ್ನೂ ಸಮನಾಗಿ ಪ್ರೀತಿಸುತ್ತಿದ್ದರು. ಅವರಿಗೆ ಎಲ್ಲ ಧರ್ಮಗಳೂ ಸತ್ಯವಾಗಿದ್ದವು.

ಇಂದು ಭರತಖಂಡದಲ್ಲಿರುವ ಲಕ್ಷಾಂತರ ಜನರು ಶ್ರೀರಾಮಕೃಷ್ಣ ಪರಮಹಂಸರ ಹೆಸರನ್ನು ಕೇಳಿರುವರು. ಅದು ಮಾತ್ರವಲ್ಲ, ಅವರ ಶಕ್ತಿ ಪ್ರಭಾವ ಭರತಖಂಡವನ್ನು ಮೀರಿ ಹೋಗಿರುವುದು. ಪ್ರಪಂಚದಲ್ಲಿ ಎಲ್ಲಿಯಾದರೂ ನಾನು ಒಂದು ಸತ್ಯವನ್ನು ಹೇಳಿದ್ದರೆ, ಆಧ್ಯಾತ್ಮಿಕ ಭಾವವನ್ನು ಬೀರಿದ್ದರೆ, ಅದು ನನ್ನ ಗುರುವಿನ ಪ್ರಭಾವ; ತಪ್ಪುಗಳು ಮಾತ್ರ ನನ್ನವು.

ಆಧುನಿಕ ಪ್ರಪಂಚಕ್ಕೆ ಶ್ರೀರಾಮಕೃಷ್ಣರ ಸಂದೇಶವಿದು: "ಸಿದ್ಧಾಂತಗಳನ್ನು ಲೆಕ್ಕಿಸಬೇಡಿ. ಮೂಢನಂಬಿಕೆಗಳನ್ನು ಲೆಕ್ಕಿಸಬೇಡಿ. ಕೋಮು, ಚರ್ಚು, ದೇವಸ್ಥಾನ ಇವುಗಳನ್ನು ಲೆಕ್ಕಿಸಬೇಡಿ. ಪ್ರತಿಯೊಬ್ಬ ಮಾನವನ ಜೀವನದ ಸಾರವಾದ ಅಧ್ಯಾತ್ಮದೊಂದಿಗೆ ಇವನ್ನು ಹೋಲಿಸಿದರೆ ಇವಕ್ಕೆ ಬೆಲೆಯಿಲ್ಲ. ಮನುಷ್ಯನಲ್ಲಿ ಇದು ಹೆಚ್ಚು ವಿಶದವಾಗಿ ಸ್ಪಷ್ಟವಾಗಿ ತೋರಿದಷ್ಟೂ ಸತ್ಕಾರ್ಯ ಸಾಧನೆಗೆ ಅವನು ಮಹಾಶಕ್ತಿಯಾಗುವನು. ಮೊದಲು ಅದನ್ನು ಸಂಪಾದಿಸಿ, ಸಾಧಿಸಿ. ಯಾರನ್ನೂ ದೂರಬೇಡಿ. ಎಲ್ಲಾ ಸಿದ್ಧಾಂತಗಳಲ್ಲೂ ಪಂಥಗಳಲ್ಲೂ ಸ್ವಲ್ಪ ಸತ್ಯವಿದೆ. ಧರ್ಮವೆಂದರೆ ಮಾತಲ್ಲ, ಹೆಸರಲ್ಲ, ಪಂಥವಲ್ಲ; ಅದು ಆಧ್ಯಾತ್ಮಿಕ ಸಾಕ್ಷಾತ್ಕಾರವೆಂಬುದನ್ನು ನಿಮ್ಮ ಜೀವನದಲ್ಲಿ ತೋರಿ. ಯಾರು ಇದನ್ನು ಅನುಭವಿಸುವರೊ, ಅವರು ಮಾತ್ರ ಇದನ್ನು ತಿಳಿದುಕೊಳ್ಳಬಲ್ಲರು. ಯಾರಲ್ಲಿ ಆಧ್ಯಾತ್ಮಿಕತೆ ಇದೆಯೊ ಅವರು ಮಾತ್ರ ಮತ್ತೊಬ್ಬರಿಗೆ ಇದನ್ನು ಕೊಡಬಲ್ಲರು, ಮಾನವಕೋಟಿಯ ಮಹಾಗುರುಗಳಾಗಬಲ್ಲರು. ಅವರೇ ಜ್ಞಾನಶಕ್ತಿ."

★

ಧಾರಾವಾಹಿ

# ವೀರಭಕ್ತ ಗಿರೀಶ್‌ಚಂದ್ರ ಘೋಷ್

**ಪ್ರವ್ರಾಜಿಕಾ ಪರಮಪ್ರಾಣಾ**

*(ಡಿಸೆಂಬರ್ ೨೦೦೮ ರ ಸಂಚಿಕೆಯಿಂದ )*

ಶ್ರೀ ನಳಿನೀರಂಜನ ಚಟ್ಟೋಪಾಧ್ಯಾಯರು ತಮ್ಮ 'ಶ್ರೀರಾಮಕೃಷ್ಣ ಮತ್ತು ವಂಗರಂಗ ಮಂಚ' ಎಂಬ ಪುಸ್ತಕದಲ್ಲಿ ಗಿರೀಶನ ಕಾಲದ ಹಾಗೂ ಈ ಆಧುನಿಕ ಯುಗದ ಶ್ರೇಷ್ಠ ನಟನಟಿಯರ ಜೀವನ ಹಾಗೂ ನಾಟಕಗಳ ಮೇಲೆ, ಶ್ರೀರಾಮಕೃಷ್ಣರ ಪ್ರಭಾವವನ್ನು ಕುರಿತು ವಿಸ್ತಾರವಾಗಿ ಅಧ್ಯಯನ ಮಾಡಿದ್ದಾರೆ.

ನಟನಟಿಯರು ರಂಗವೇದಿಕೆಯನ್ನು ಪ್ರವೇಶಿಸುವ ಮೊದಲು ಶ್ರೀರಾಮಕೃಷ್ಣರ ಚಿತ್ರಕ್ಕೆ ನಮಸ್ಕರಿಸುವ ಸಂಪ್ರದಾಯವನ್ನು ಗಿರೀಶ್ ಆರಂಭಿಸಿದನು. ಇದು ಇಂದಿಗೂ ಬಂಗಾಳದ ನಾಟಕಶಾಲೆಗಳಲ್ಲಿ ಮುಂದುವರೆಯುತ್ತಿದೆ. ಆಧುನಿಕ ಯುಗದ ನಟಿ ಸಾವಿತ್ರಿ ಚಟ್ಟೋಪಾಧ್ಯಾಯ ಎಂಬುವವರು ತಮ್ಮ ೧೦.೮.೧೯೭೫ ರ ಒಂದು ಪತ್ರದಲ್ಲಿ, 'ವಂಗರಂಗ ಮಂಚ' ಪುಸ್ತಕದ ಲೇಖಕರಿಗೆ ಹೀಗೆ ಬರೆಯುತ್ತಾರೆ: "ತುಂಬ ಹಿಂದೆ ನಮ್ಮ ನಾಟಕಶಾಲೆಯ ಒಬ್ಬ ಶ್ರೇಷ್ಠ ಅಭಿನೇತ್ರಿಯಾದ  ನಟಿ ವಿನೋದಿನಿಯ ಅಭಿನಯವನ್ನು ಮೆಚ್ಚಿ ಶ್ರೀರಾಮಕೃಷ್ಣ ಪರಮಹಂಸರು ಆಶೀರ್ವದಿಸಿದ್ದರು. ಈ ಆಶೀರ್ವಾದವು ನಟಿ ವಿನೋದಿನಿಯಿಂದ ಹಿಡಿದು ಇಂದಿನ ಕಾಲದ ಎಲ್ಲಾ ನಟನಟಿಯರ ಮೇಲೂ ಹರಿಯುತ್ತಿದೆ. ಈಗಲೂ ರಂಗವೇದಿಕೆಯನ್ನು ಪ್ರವೇಶಿಸುವ ಮೊದಲು ಶ್ರೀರಾಮಕೃಷ್ಣರ ಚಿತ್ರಪಟದ ಎದುರಿಗೆ ನಿಂತಾಗ ನಮಗೆ, ಅವರು ನಟಿ ವಿನೋದಿನಿಗೆ ಹೇಳಿದ್ದ, **'ಅಮ್ಮಾ, ನಿನಗೆ ಚೈತನ್ಯವಾಗಲಿ!'** ಎಂಬ ಆ ಆಶೀರ್ವಾದದ ವಾಣಿ ನೆನಪಿಗೆ ಬರುತ್ತದೆ."

ಮನಮೋಹನ ಮಿತ್ರ ಎಂಬ ಭಕ್ತ ಒಮ್ಮೆ ಗಿರೀಶನಿಗೆ ಹೇಳಿದ್ದನು, "ನಿನ್ನನ್ನೇ ಅವರು ಏಕೆ ಆಕರ್ಷಿಸಿದರೆಂದು ಈಗ ನನಗೆ ಅರ್ಥವಾಗುತ್ತಿದೆ. ವಿಶಿಷ್ಟನಾದ ವ್ಯಕ್ತಿಯನ್ನು ಎಳೆದುಕೊಂಡರೆ, ಅವನ ಹಿಂದೆ ಅವನನ್ನು ಆಶ್ರಯಿಸಿಕೊಂಡವರೆಲ್ಲಾ ತಾವಾಗಿಯೇ ಹತ್ತಿರ ಬಂದುಬಿಡುತ್ತಾರೆ" (*ತತ್ತ್ವಮಂಜರಿ ಪತ್ರಿಕೆ*).

ಒಮ್ಮೆ ಶ್ರೀರಾಮಕೃಷ್ಣರು ತಮ್ಮ ಕಾಲನ್ನು ಒತ್ತುವಂತೆ ಗಿರೀಶನಿಗೆ ಹೇಳಿದರು. "ಇದೆಂಥಾ ತಾಪತ್ರಯ ಬಂದಿತಪ್ಪಾ! ಈಗ ಮಂಡಿಯೂರಿ ಕುಳಿತು ಇವರ ಕಾಲುಗಳನ್ನು ಬೇರೆ ಒತ್ತಬೇಕೆ?" ಎಂದುಕೊಂಡನು ಗಿರೀಶ್. ಮುಂದೆ ಈ ಘಟನೆ ನೆನಪಾದ ಒಡನೆ ಅವನ ಕಣ್ಣಿನಲ್ಲಿ ನೀರು ಬರುತ್ತಿತ್ತು. ಸ್ವಲ್ಪ ಕಾಲ ಕಳೆದ ಮೇಲಷ್ಟೆ, ಶ್ರೀರಾಮಕೃಷ್ಣರ ಅಪಾರ ಸ್ನೇಹ ಕರುಣೆಗಳನ್ನು ನೆನೆಸಿಕೊಂಡು ಶಾಂತನಾಗುತ್ತಿದ್ದನು. ತನ್ನ 'ಶ್ರೀ ಶ್ರೀರಾಮಕೃಷ್ಣ' ಕವಿತೆಯಲ್ಲಿ "ಅವರ ಕೃಪೆಯಿಂದಲೇ ಅವರನ್ನು ಅರಿತುಕೊಂಡು, ಅವರ ಶ್ರೀಚರಣಗಳಲ್ಲಿಯೇ ನನ್ನ ಪ್ರಾಣವನ್ನು ಅರ್ಪಿಸಿದೆ" ಎಂದು ಅವನು ಬರೆಯುತ್ತಾನೆ.

ಶ್ರೀರಾಮಕೃಷ್ಣರ ಶರೀರತ್ಯಾಗದ ನಂತರ ಗಿರೀಶ್ ನಾಟಕ ರಂಗವನ್ನು ಮಾತ್ರವಲ್ಲ, ಸಂಸಾರವನ್ನೇ ತ್ಯಜಿಸಿ ಸಂನ್ಯಾಸವನ್ನು ಸ್ವೀಕರಿಸುವ ನಿರ್ಧಾರಕ್ಕೆ ಬಂದಿದ್ದನು. ಈ ಬಗ್ಗೆ ಸ್ವಾಮಿ ಗಂಭೀರಾನಂದರು ಹೀಗೆ ಬರೆಯುತ್ತಾರೆ: "ಸಂಸಾರತಾಪದಿಂದ ನೊಂದ ಗಿರೀಶ್‌ಬಾಬು ಒಂದು ದಿನ ಶ್ರೀಮಾತೆ ಶಾರದಾ ದೇವಿಯವರ ಬಳಿ ಹೋಗಿ, ಸಂನ್ಯಾಸವನ್ನು ಸ್ವೀಕರಿಸುವ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಶ್ರೀಮಾತೆ ಅದಕ್ಕೆ ಒಪ್ಪಿಕೊಳ್ಳಲಿಲ್ಲ. ಅತ್ಯಂತ ಮೇಧಾವಿ ಹಾಗೂ ವಾಗ್ಮಿಯಾದ ಈ ಮಹಾಕವಿ ಸುಮಾರು ಅರ್ಧ ಗಂಟೆಯವರೆಗೆ ನಾನಾ ರೀತಿಯ ಯುಕ್ತಿ ತರ್ಕಗಳಿಂದ ಶ್ರೀಮಾತೆಯವರನ್ನು ಇದಕ್ಕೆ ಒಪ್ಪಿಸಲು ಬಹಳ ಪ್ರಯತ್ನಪಟ್ಟನು. ಗಿರೀಶ್ ಘೋಷನಂಥ ತೀಕ್ಷ್ಣಬುದ್ಧಿಯ ವ್ಯಕ್ತಿಯ ಎದುರು ತಮ್ಮ ಅಭಿಪ್ರಾಯವನ್ನು ಬದಲಿಸದೆ ವಾದವನ್ನು ಮಾಡುವುದು ಕೆಲವೇ ವ್ಯಕ್ತಿಗಳಿಗೆ ಸಾಧ್ಯ. ಆದರೆ ಶ್ರೀಮಾತೆ ತಮ್ಮ ನಿರ್ಧಾರದಿಂದ ಒಂದಿನಿತೂ ಸರಿಯದೆ ದೃಢಚಿತ್ತರಾಗಿ ಆ ದಿನ ಆತನನ್ನು ಎದುರಿಸಿದರು....... ಇದಾದನಂತರ ಕೊಲ್ಕತಾಗೆ ಹಿಂತಿರುಗಿದ ಗಿರೀಶ್ ಸಂಪೂರ್ಣ ಹೊಸ ವ್ಯಕ್ತಿಯಾಗಿ ಮಾರ್ಪಟ್ಟನು. ಶ್ರೀರಾಮಕೃಷ್ಣರ ಅಲೌಕಿಕ ಜೀವನ ಮತ್ತು ಉಪದೇಶಗಳ ಬೆಳಕಿನಲ್ಲಿ ತನ್ನುಳಿದ ಜೀವನವನ್ನು ಕಳೆಯಲು ಸಂಕಲ್ಪ ಮಾಡಿದನು" (*ಶ್ರೀ ಮಾ ಶಾರದಾ ದೇವಿ*, ಪು. ೨೮೫). ಶ್ರೀಮಾತೆಯವರು ಕೂಡ ಗಿರೀಶನಿಗೆ ನಾಟಕಶಾಲೆಯ ತನ್ನ  ಅಮೋಘಕಾರ್ಯವನ್ನು ಮುಂದುವರಿಸುವಂತೆ ಹೇಳಿದರು.

೧೮೯೮ ರ ಫೆಬ್ರವರಿ ತಿಂಗಳು. ಬೇಲೂರಿನ ನೀಲಾಂಬರ ಮುಖರ್ಜಿಯ ಮನೆಯಲ್ಲಿ ಮಠ ಸ್ಥಾಪಿತವಾಗಿತ್ತು. ಶ್ರೀರಾಮಕೃಷ್ಣರ ಜಯಂತ್ಯುತ್ಸವದಲ್ಲಿ ಭಾಗವಹಿಸಲು ಗಿರೀಶ್ ಮಠಕ್ಕೆ ಹೋಗಿದ್ದನು. ಅಮೆರಿಕದಿಂದ ಹಿಂತಿರುಗಿದ್ದ ಸ್ವಾಮಿ ವಿವೇಕಾನಂದರ ಉಪಸ್ಥಿತಿಯಿಂದ ಆ ದಿನ ಮಠದಲ್ಲಿ ಅತ್ಯಂತ ಸಂಭ್ರಮದ ವಾತಾವರಣವಿತ್ತು. ಸಂನ್ಯಾಸಿಗಳು ಹಾಗೂ ಭಕ್ತರೆಲ್ಲಾ ಸೇರಿ ಸ್ವಾಮಿ ವಿವೇಕಾನಂದರನ್ನು ಭಸ್ಮ, ರುದ್ರಾಕ್ಷಿಮಾಲೆ ಮತ್ತು ಕುಂಡಲಗಳಿಂದ ಶಿವನಂತೆ ಅಲಂಕರಿಸಿದರು. ಅನಂತರ ಅವರೆದುರು ಭಕ್ತಿಗೀತೆಗಳನ್ನು ಹಾಗೂ ಸ್ತೋತ್ರಪಾಠಗಳನ್ನು ಹಾಡುತ್ತ ಆನಂದಿಸುತ್ತಿದ್ದರು. ಆ ಅಪೂರ್ವ ಆಧ್ಯಾತ್ಮಿಕ ವಾತಾವರಣದಲ್ಲಿ ಎಲ್ಲರೂ ತನ್ಮಯರಾಗಿ ಹೋದರು. ಇದ್ದಕ್ಕಿದ್ದಂತೆ ಸ್ವಾಮಿ ವಿವೇಕಾನಂದರು ತಮಗೆ ಹಾಕಿದ್ದ ಶಿವನ ವೇಷಭೂಷಣಗಳನ್ನು ಒಂದೊಂದಾಗಿ ತೆಗೆದು, ಗಿರೀಶ್‌ಘೋಷನಿಗೆ ತೊಡಿಸಲಾರಂಭಿಸಿದರು. ಅವನ ವಿಶಾಲವಾದ ಶರೀರಕ್ಕೆ ಭಸ್ಮವನ್ನು ಲೇಪಿಸಿದರು; ಕೊರಳಿನಲ್ಲಿ ದೊಡ್ಡ ಮಣಿಗಳ ರುದ್ರಾಕ್ಷಿಮಾಲೆಯನ್ನು ಹಾಕಿದರು. ಗಿರೀಶ್ ಈ ಅಲಂಕಾರದಲ್ಲಿ ಸುಭಗಸುಂದರನಾಗಿ ಶೋಭಿಸತೊಡಗಿದನು. ಬಿಟ್ಟ ಕಣ್ಣುಗಳನ್ನು ಮುಚ್ಚದೆ ಎಲ್ಲರೂ  ಸುತ್ತಲೂ ನೆರೆದು ಈ ದೃಶ್ಯವನ್ನು ವೀಕ್ಷಿಸಲಾರಂಭಿಸಿದರು.

ಇಷ್ಟೆಲ್ಲ ಆದ ನಂತರ ಸ್ವಾಮಿ ವಿವೇಕಾನಂದರು ಗಂಭೀರ ಸ್ವರದಲ್ಲಿ ಹೀಗೆ ಹೇಳಿದರು: "ಶ್ರೀರಾಮಕೃಷ್ಣರು ಇವರನ್ನು ಭೈರವನ ಅವತಾರ ಎನ್ನುತ್ತಿದ್ದರು. ಇವರ ಹಾಗೂ ನಮ್ಮ ನಡುವೆ ಯಾವ ವ್ಯತ್ಯಾಸವೂ